## ನೆಫ್ರೋ-ಯುರಾಲಜಿ ಸಂಸ್ಥೆ

ವಿಕ್ಟೋರಿಯಾ ಆಸ್ಪತ್ರೆ ಆವರಣ, ಬೆಂಗಳೂರು - 560 002.

ನಿರ್ದೇಶಕರ ಕಛೇರಿ,
ನೆಫ್ರೋ-ಯುರಾಲಜಿ ಸಂಸ್ಥೆ,
ವಿಕ್ಟೋರಿಯಾ ಆಸ್ಪತ್ರೆ ಆವರಣ, ಬೆಂಗಳೂರು.

ಸಂಖ್ಯೆ: ನೆಯುಸಂ/ಕಟ್ಟಡ/12/2016-17

ದಿನಾಂಕ: 24.01.2017

### ಟೆಂಡರ್ ಪ್ರಕಟಣೆ

ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆ ಆವರಣದಲ್ಲಿರುವ ನೆಫ್ರೋ-ಯುರಾಲಜಿ ಸಂಸ್ಥೆಯು ಈ ಕೆಳಕಂಡ ಕೆಲಸಕ್ಕಾಗಿ ನೊಂದಾಯಿಸಿಕೊಂಡಿರುವ ಲೋಕೋಪಯೋಗಿ ಇಲಾಖೆಯ ಅಧಿಕೃತ ಗುತ್ತಿಗೆದಾರರಿಂದ ಟೆಂಡರುಗಳನ್ನು ಸ್ವೀಕರಿಸಲು ಕಡೆಯ ದಿನಾಂಕವನ್ನು ಕಾಲಂ ನಂ 10 ರಂತೆ ನಿಗದಿಪಡಿಸಿ ಸಂಜೆ 4.00 ಘಂಟೆಯೊಳಗೆ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಸ್ವೀಕರಿಸಲಾಗುವುದು. ಸಾಧ್ಯವಾದಲ್ಲಿ ಅಂದೇ ಸದರಿ ಟೆಂಡರುಗಳನ್ನು ಹಾಜರಾಗುವ ಗುತ್ತಿಗೆದಾರರ ಮುಂದೆ ತೆರೆಯಲಾಗುವುದು. ಸಾಧ್ಯವಾಗದಿದ್ದಲ್ಲಿ ಮುಂದಿನ ದಿನ ಅಂದರೆ ರಜಾ ದಿನವನ್ನು ಬಿಟ್ಟು ತೆರೆಯಲಾಗುವುದು. ಕೆಲಸಕ್ಕೆ ಸಂಬಂಧಪಟ್ಟ ದಾಖಲೆ ಕಡತಗಳನ್ನು ಹಾಗೂ ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ನೋಡಬಹುದು.

ಟೆಂಡರ್‌ಗೆ ಸಂಬಂಧಪಟ್ಟ ಡಾಕ್ಯುಮೆಂಟ್ಸ್‌ಗಳನ್ನು ಪಡೆಯಲು ಸದರಿ ಕಛೇರಿಯಲ್ಲಿ ಕಾಲಂ 8 ರಲ್ಲಿ ನಮೂದಿಸಿರುವ ದಿನಾಂಕದಂದು ಬೆಳಿಗ್ಗೆ 9.00 ಘಂಟೆಯಿಂದ ಸಂಜೆ 4.00 ಘಂಟೆಯೊಳಗೆ (ಮಧ್ಯಾಹ್ನ 1.00 ರಿಂದ 2.00 ರವರೆಗೆ ಊಟದ ಸಮಯ ಹೊರತುಪಡಿಸಿ) ಅರ್ಜಿಯನ್ನು ಸಲ್ಲಿಸಿ ಅದರ ಜೊತೆಯಲ್ಲಿ ಟೆಂಡರ್ ಡಾಕ್ಯುಮೆಂಟ್ಸ್‌ಗಳ ಹಣವನ್ನು ಪಾವತಿ ಮಾಡಬೇಕು. ಟೆಂಡರ್ ಡಾಕ್ಯುಮೆಂಟ್‌ಗಳನ್ನು ಕಾಲಂ ನಂ. 9ರಲ್ಲಿ ನಮೂದಿಸಿರುವ ದಿನಾಂಕದಂದು ಕೊಡಲಾಗುವುದು ಹಾಗೂ ಟೆಂಡರ್ ಡಾಕ್ಯುಮೆಂಟ್ಸ್‌ಗಳಿಗೆ ಅರ್ಜಿ ಸಲ್ಲಿಸುವಾಗ ಅದರ ಜೊತೆಯಲ್ಲಿ ತಾವು ಹಿಂದೆ ಮಾಡಿದ ಕೆಲಸಗಳು ಮತ್ತು ಈಗ ನಡೆಯುತ್ತಿರುವ ಕೆಲಸಗಳ ಮೊಬಲಗು ಮತ್ತು ಇತರೆ ವಿವರಗಳನ್ನು ಲಗತ್ತಿಸುವುದು. ಸದರಿ ಕೆಲಸವನ್ನು ಶೀಘ್ರವಾಗಿ ಮುಗಿಸಲು ಬೇಕಾಗುವ ಆಧುನಿಕ ಯಂತ್ರೋಪಕರಣಗಳನ್ನು ಸ್ವಂತವಾಗಿ ಹೊಂದಿರುವ ವಿವರಗಳನ್ನು ಸಹ ಲಗತ್ತಿಸುವುದು. ಸದರಿ ಕೆಲಸಕ್ಕೆ ತಾಂತ್ರಿಕ ಸಿಬ್ಬಂದಿಯನ್ನು ಹೊಂದಿರುವ ವಿವರಗಳನ್ನು ಸಹ ಲಗತ್ತಿಸುವುದು. ಕಾಮಗಾರಿಗೆ ಬೇಕಾಗುವ ಸಿಮೆಂಟ್ ಸ್ಟೀಲ್‌ಗಳನ್ನು ಗುತ್ತಿಗೆದಾರರೇ ಸ್ವಂತವಾಗಿ ಒದಗಿಸಿಕೊಳ್ಳಬೇಕು.

| ಕ್ರ. ಸಂ | ಕಾಮಗಾರಿಯ ಹೆಸರು | ಕೆಲಸಕ್ಕೆ ಇಟ್ಟಿರುವ ಮೊಬಲಗು ರೂ. | ಇ.ಎಮ್.ಡಿ .(ಯು.) | ಟೆಂಡರ್ ಡಾಕ್ಯುಮೆಂಟ್ಸ್ ಹಣ (ರೂ.) | ಗುತ್ತಿಗೆದಾರ ರ ದರ್ಜೆ | ಕೆಲಸ ಮುಗಿಸಲು ಕಾಲಾವಕಾಶ | ಟೆಂಡರ್ ಡಾಕ್ಯುಮೆಂಟ್ಸ್‌ಗಳಿಗೆ ಅರ್ಜಿಯನ್ನು ಅದಕ್ಕೆ ತಕ್ಕಂತೆ ಹಣ ಸ್ವೀಕರಿಸುವ ದಿನಾಂಕ (4.00 ಘಂಟೆಯೊಳಗೆ) | ಟೆಂಡರ್ ಡಾಕ್ಯುಮೆಂಟ್ಸ್‌ಗಳನ್ನು ಗುತ್ತಿಗೆದಾರರಿಗೆ ನೀಡುವ ಕೊನೆಯ ದಿನಾಂಕ (4.00 ಘಂಟೆಯೊಳಗೆ) | ಟೆಂಡರುಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ (4.00 ಘಂಟೆಯೊಳಗೆ) | ಟೆಂಡರ್ ಕರೆದಿರುವುದು |
|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 |
| 1. | Construction of extension for Store room at I.N.U., Victoria Hospital Campus, Bangalore. | 4.95 Lakhs | 12,500/- | 400 + ತೆರಿಗೆಗಳು (14%) | 4ನೇ ದರ್ಜೆ ಮತ್ತು ಮೇಲ್ಪಟ್ಟ | 15 ದಿನ | 27.01.2017 | 30.01.2017 | 03.02.2017 | ಮೊದಲನೇ ಕರೆ |

ಟಿಪ್ಪಣಿ:

1. ಇ.ಎಮ್.ಡಿಯನ್ನು ನಿರ್ದೇಶಕರು, ನೆಫ್ರೋ-ಯುರಾಲಜಿ ಸಂಸ್ಥೆ, ಬೆಂಗಳೂರು ಇವರ ಹೆಸರಿನಲ್ಲಿ ಡಿ.ಡಿ. (ಡಿಮ್ಯಾಂಡ್ ಡ್ರಾಫ್ಟ್) ಪಡೆದು ಟೆಂಡರ್ ಜೊತೆಯಲ್ಲಿ ಸಲ್ಲಿಸುವುದು. ಯಾವುದೇ ಕಾರಣಕ್ಕೂ ಕರ್ನಾಟಕ ಕಂಟ್ರ್ಯಾಕ್ಟರ್ಸ್ ಕೋ-ಆಪರೇಟಿವ್ ಅವರು ನೀಡುವ ಡೆಪಾಸಿಟ್ ಸರ್ಟಿಫಿಕೇಟ್‌ಗಳನ್ನು ಸ್ವೀಕೃತಿ ಮಾಡುವುದಿಲ್ಲ.
2. ಯಾವ ಕಾರಣವನ್ನು ನೀಡದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ಸ್ವೀಕರಿಸುವ ಮತ್ತು ತಿರಸ್ಕರಿಸುವ ಅಧಿಕಾರವನ್ನು ಕಾದಿರಿಸಿಕೊಳ್ಳಲಾಗಿದೆ.
3. ಯಾವುದೇ ನಿಬಂಧನೆಗೊಳಗೊಂಡ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು.
4. ಟೆಂಡರ್ ಕರೆಯು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧ್ಯಾದೇಶ 2000ರಲ್ಲಿನ ಮಾರ್ಗಸೂಚಿಗಳಿಗೆ ಒಳಪಟ್ಟಿರುತ್ತದೆ.
5. ಸರ್ಕಾರದ ಆದೇಶ ಸಂಖ್ಯೆ: ಎಲ್‌ಡಿ:300:ಎಲ್‌ಇಟಿ2006 ದಿ: 18.1.07ರ ಅನುಗುಣವಾಗಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಗೆ ಶೇಕಡ 1ರಷ್ಟು ಕಾರ್ಮಿಕ ಕಲ್ಯಾಣ ಸುಂಕವನ್ನು ಕಡಿತಗೊಳಿಸಲಾಗುವುದು.

ನಿರ್ದೇಶಕರು,
ನೆಫ್ರೋ-ಯುರಾಲಜಿ ಸಂಸ್ಥೆ,
ವಿಕ್ಟೋರಿಯಾ ಆಸ್ಪತ್ರೆ ಆವರಣ,
ಬೆಂಗಳೂರು.

ಪ್ರತಿ:

1. ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ (ವೈದ್ಯಕೀಯ ಶಿಕ್ಷಣ) ಇಲಾಖೆ, ವಿಕಾಸಸೌಧ, ಬೆಂಗಳೂರು.
2. ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು.
3. ನಿರ್ದೇಶಕರು, ವೈದ್ಯಕಿಯ ಶಿಕ್ಷಣ ಇಲಾಖೆ, ಆನಂದರಾವ್ ವೃತ್ತ, ಬೆಂಗಳೂರು.
4. ಕಾರ್ಯಪಾಲಕ ಇಂಜಿನಿಯರ್, ನಂ. 2ನೇ ಕಟ್ಟಡಗಳ ವಿಭಾಗ, ಬೆಂಗಳೂರು.
5. ಕಾರ್ಯಪಾಲಕ ಇಂಜಿನಿಯರ್, ನಂ. 9ನೇ ಕಟ್ಟಡಗಳ ಉಪವಿಭಾಗ, ವಿಕ್ಟೋರಿಯಾ ಆಸ್ಪತ್ರೆ ಆವರಣ, ಬೆಂಗಳೂರು
6. ಲೆಕ್ಕ ಪತ್ರ ವಿಭಾಗ, ನೆ.ಯು.ಸಂ. ಬೆಂಗಳೂರು.
7. ಕಛೇರಿ ಸೂಚನಾ ಫಲಕಕ್ಕೆ
8. ಸಂಸ್ಥೆಯ ವೆಬ್‌ಸೈಟ್: **www.nephrourology.in**
9. ಕರಡು ಪ್ರತಿ.